"ಭಾರತದ ಪುರಾಣಗಳ ಬಗ್ಗೆ ಎರಡು ಮಾತಿಲ್ಲ. ಅದರ ಬಗ್ಗೆ ನನಗೂ ಪರಿಚಯವಿದ್ದಿದ್ದರೆ..." ಎಂದೆ ನಾನು.

"ಪಾಲ್, ಕೈಟಿ ಸರಿಯಿದ್ದಾಗ ಅವಳ ಮಾತು ಮತ್ತು ತನ್ನ ಅಗತ್ಯಗಳ ಬಗ್ಗೆ ಅವಳು ಹೇಳುವ ವಿಧಾನಗಳು ವಿಚಿತ್ರವಾಗಿರುತ್ತವೆ. ಗಿಳಿಯ ಮೇಲೆ ಕೂತು ಕಾಮದೇವ ಅವಳ ಮನೆಗೆ ಬಂದು ಬಾಣ ಬಿಡುವ ವಿಷಯ ತುಂಬಾ ರೋಮ್ಯಾಂಟಿಕ್ ಆಗಿದೆ. ಕೈಟಿಗೆ ಕಾಮದೇವನ ಪುರಾಣದ ಗುಣಗಳ ಬಗೆಗಿರುವ ನಂಬಿಕೆ ಈಡೇರುತ್ತಿದೆ. ಸದ್ಯ, ಅವಳ ಗಂಡ ಮರಳಿ ಬಂದಿದ್ದಾನೆ. ಅವಳ ಏಕಾಂತ ಕೊನೆಗೊಳ್ಳುತ್ತಿದೆ. ನಿನ್ನಿಂದ ಅವಳ ಬಗ್ಗೆ ಕೇಳಿ ನನಗೂ ನನ್ನ ಯೌವನ ನೆನಪಾಗುತ್ತಿದೆ. ನನ್ನ ಪತಿ ರೊಮ್ಯಾಂಟಿಕ್ ಆಗಿದ್ದ. ಪಾಲ್, ನನ್ನನ್ನು ನೋಡು, ಯೌವನ ಬಹು ಬೇಗನೇ ಕಳೆದು ಹೋಗುತ್ತದೆ. ಕಾಮದೇವನನ್ನು ನೆನಪಿಟ್ಟುಕೋ. ಕೈಲಿಯ ಬಗ್ಗೆ ಗಮನಕೊಡು."

"ನಾನು ಕೈಲಿಗೆ, ಆಗಾಗ ನಿಮ್ಮ ಬಳಿ ಸಭ್ಯತೆ–ಸಂಸ್ಕೃತಿಯ ಬಗ್ಗೆ ಏನಾದರೂ ಕಲಿಯುವಂತೆ ಖಂಡಿತ ಹೇಳುತ್ತೇನೆ."

"ಹೂಂ, ಕೈಲಿ ಯಾವಾಗಬೇಕಾದರೂ ಬರಬಹುದು. ಅಲ್ಲದೆ, ನಾನೂ ಸಹ ಇಂಡಿಯಾ ಬಗ್ಗೆ ತಿಳಿದುಕೊಳ್ಳಲು ಸಾಧ್ಯವಾಗುತ್ತದೆ."

ನಾನು ಇಲೇನಳಿಗೆ ಧನ್ಯವಾದವನ್ನು ಹೇಳಿ ಮೆಲ್ಲ ಮೆಲ್ಲನೆ ಮನೆಯಲ್ಲಿ ಕೂತಿದ್ದ ಕೈಲಿಯ ಬಳಿಗೆ ಹೋಗಲು ಹೊರಟೆ. ಆದರೆ, ಮನೆಗೆ ಹೋಗುವುದಕ್ಕೆ ಮೊದಲು ನಾನೊಂದು ಹೊಸ ದ್ವಂದ್ವದಲ್ಲಿ ಸಿಲುಕಿದೆ. ಗಿಳಿಯ ಮೇಲೆ ಕೂತ ಅದೃಶ್ಯ ಕಾಮದೇವ ಬಾಣ ಬಿಡುವ ವಿಷಯವನ್ನು ಕೈಟಿಗೆ ನಾನು ಹೇಳಿದ್ದೆನೋ ಅಥವಾ ಕೈಟಿ ನನಗೆ ಹೇಳಿದ್ದಳೋ?

ಮನೆಗೆ ಹೋದಾಗ ಕೈಲಿ ಲಿವಿಂಗ್ ರೂಮಿನಲ್ಲಿ ಸೋಫಾದಲ್ಲಿ ಕೂತು ಟಿ.ವಿ.ಯಲ್ಲಿ ಸಿನಿಮಾ ನೋಡುತ್ತಿದ್ದಳು. ಚಿತ್ರದಲ್ಲಿ ಒಬ್ಬ ರಾಜ ಮತ್ತು ಅವನ ನಗ್ನ ರಾಣಿಯರು ಸ್ನಾನ ಮಾಡುತ್ತಿದ್ದರು. ನಾನು ಕೈಲಿಯನ್ನು ಒತ್ತಿಕೊಂಡು ಕೂತೆ. ಆಗ ನನಗೆ ಕೈಟಿ ಹೇಳಿದ ಪುರಾಣ ನೆನಪಾಯಿತು. ಅನಂತರ ಇಲೇನಳ ಯೌವನ ಶೀಘ್ರವೇ ಕಳೆದು ಹೋದ ವಿಷಯ ಸಹ ನೆನಪಾಯಿತು. ನಾನು ಕೈಲಿಯನ್ನು ಬಿರುಸಾಗಿ ತಬ್ಬಿದೆ. ನಾವು ಒಂದಾದೆವು. ಸ್ವಲ್ಪ ಹೊತ್ತಿನ ಅನಂತರ ಇಬ್ಬರೂ ಪರಸ್ಪರ ಕೈ ಹಿಡಿದುಕೊಂಡು ಕೋಣೆಗೆ ಹೋದೆವು; ನಾನು ಅದೃಶ್ಯ ದೇವರ ಅನುಯಾಯಿಯಾದೆ. ಮರುದಿನ ಕೆಲಸಕ್ಕೆ ಹೋಗುತ್ತಲೇ ನಾನು ಕೈಟಿಯನ್ನು ಅಂಗಳದಲ್ಲಿ ನೋಡಿದೆ, ಮರದಿಂದ ಪಂಜರ ಕಣ್ಮರೆಯಾಗಿತ್ತು. ಕೈಟಿ ಆ ಪಂಜರವನ್ನು ಅಗತ್ಯವಿರುವವರಿಗೆ ಕೊಟ್ಟಿರಬಹುದೆಂದು ಯೋಚಿಸಿದೆ. ಅವಳು ಮುಂದೆಂದಾದರೂ ಭೇಟಿಯಾದರೆ ಈ ರಹಸ್ಯವನ್ನು ಅವಳಲ್ಲಿ ಖಂಡಿತ ಕೇಳುತ್ತೇನೆ.


### ಡಾ. ಜಗಜೀತ್ ಬರಾಡ್

ಲೇಖಕ ಬರಾಡ್ ಪಂಜಾಬಿನ ಶ್ರೇಷ್ಠ ಕವಿ, ಕಥೆಗಾರ ಮತ್ತು ಕಾದಂಬರಿಕಾರ. ಅವರ ಎರಡು ಕಥಾಸಂಕಲನಗಳು, ಒಂದು ಕವನ ಸಂಕಲನ, ಒಂದು ಕಾದಂಬರಿ ಪ್ರಕಟವಾಗಿವೆ. ಅಮೆರಿಕದ ವಿಶ್ವವಿದ್ಯಾಲಯವೊಂದರಲ್ಲಿ ಅರ್ಥಶಾಸ್ತ್ರದ ಅಧ್ಯಾಪಕರಾಗಿದ್ದ ಅವರು ವೃತ್ತಿಯಿಂದ ನಿವೃತ್ತರಾಗಿದ್ದಾರೆ. ಪ್ರಸ್ತುತ ಅಮೆರಿಕದಲ್ಲಿ ನೆಲೆಸಿದ್ದಾರೆ.

### ಡಿ.ಎನ್. ಶ್ರೀನಾಥ್

ಕನ್ನಡ–ಹಿಂದಿ ಭಾಷೆಗಳಲ್ಲಿ ಪರಸ್ಪರ ಅನುವಾದವನ್ನು ಮಾಡುವ ಶ್ರೀನಾಥ್ ಅವರ 100 ಅನುವಾದಿತ ಕೃತಿಗಳು ಪ್ರಕಟಗೊಂಡಿವೆ. ಪ್ರಸ್ತುತ ಶಿವಮೊಗ್ಗದಲ್ಲಿ ನೆಲೆಸಿದ್ದಾರೆ.